೧	೨	೩	೪	೫
೪.	ದಾವಣಗೆರೆ	೫೧	೧	೧೦೦.೦೦
೫.	ಕೋಲಾರ	೪೯		೧೦೦.೦೦
೬.	ಶಿವಮೊಗ್ಗ	೨೮		೧೦೦.೦೦
೭.	ತುಮಕೂರು	೩೭		೧೦೦.೦೦
೮.	ಮೈಸೂರು	೫೩		೧೦೦.೦೦
೯.	ಚಾಮರಾಜನಗರ	೨೩		೧೦೦.೦೦
೧೦.	ಚಿಕ್ಕಮಗಳೂರು	೪೦		೧೦೦.೦೦
೧೧.	ದಕ್ಷಿಣ ಕನ್ನಡ	೨೯	೫	೧೦೦.೦೦
೧೨.	ಹಾಸನ	೫೬		೧೦೦.೦೦
೧೩.	ಕೊಡಗು	೧೮	೩	೧೦೦.೦೦
೧೪.	ಮಂಡ್ಯ	೬೦		೧೦೦.೦೦
೧೫.	ಉಡುಪಿ	೩೮		೧೦೦.೦೦
೧೬.	ಬೆಳಗಾಂವ	೧೨೬		೧೦೦.೦೦
೧೭.	ಬಾಗಲಕೋಟೆ	೩೪		೧೦೦.೦೦
೧೮.	ಬಿಜಾಪುರ	೮೨	೧	೧೦೦.೦೦
೧೯.	ಧಾರವಾಡ	೨೧		೧೦೦.೦೦
೨೦.	ಗದಗ	೩೨೧	೧	೧೦೦.೦೦
೨೧.	ಹಾವೇರಿ	೫೦		೧೦೦.೦೦
೨೨.	ಉತ್ತರ ಕನ್ನಡ	೭೯		೧೦೦.೦೦
೨೩.	ರಾಯಚೂರು	೪೧		೧೦೦.೦೦
೨೪.	ಬಳ್ಳಾರಿ	೫೯	೧	೧೦೦.೦೦
೨೫.	ಬೀದರ್	೩೦		೧೦೦.೦೦
೨೬.	ಗಲ್ಬರ್ಗಾ	೭೬		೧೦೦.೦೦
೨೭.	ಕೊಪ್ಪಳ	೩೨		೧೦೦.೦೦
	ಒಟ್ಟು	೧೨೯೬	೧೨	೨೭೦೦.೦೦

ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರ ನೇಮಕಾತಿ

2608(3145)ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಸರ್ಕಾರದ ನೀರ್ಧಾರವೇನು?

2) ಈ ಕುರಿತು ಹಿಂದೆಯೇ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿತ್ತೆ;

3) ಇನ್ನು ಮುಂದೆ ನೇಮಕಾತಿ ಮಾಡಿಕೊಳ್ಳುವುದಕ್ಕೆ ಸರ್ಕಾರ ಯಾವಾಗ ಪ್ರಕ್ರಿಯೆ ಪ್ರಾರಂಭಿಸುವುದು?

ಶ್ರೀ ಹೆಚ್. ವಿಶ್ವನಾಥ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :—

ಅ) ಹೌದು ಪ್ರಾಥಮಿಕ ಶಾಲೆಗಳಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೊಂದರಂತೆ ಮಂಜೂರಾಗಿರುವ 223 ಚಿತ್ರಕಲಾ ಶಿಕ್ಷಕರನ್ನು ಹುದ್ದೆಗಳನ್ನು 2001-2002ನೇ ಸಾಲಿನಲ್ಲಿ ಭರ್ತಿ ಮಾಡುವ ಸಂಬಂಧ ವ್ಯಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಕಾರ್ಯ ಪ್ರಗತಿಯಲ್ಲಿದ್ದು, ಸರ್ಕಾರದ ಅಂತಿಮ ಆದೇಶ ಹೊರಟ ನಂತರ ನೇಮಕಾತಿ ಮಾಡಿಕೊಳ್ಳಲಾಗುವುದು.

ಪ್ರೌಢಶಾಲಾ ಚಿತ್ರಕಲಾ ಶಿಕ್ಷಕರ ಹುದ್ದೆಗೆ ಶಿಕ್ಷಕರನ್ನು ಭರ್ತಿಮಾಡಲು ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲಾಗಿದೆ.

2) ಸರ್ಕಾರಿ ಪ್ರೌಢಶಾಲೆಗಳಿಗೆ ಚಿತ್ರಕಲಾ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವ ಪ್ರಕ್ರಿಯೆ ಈ ಹಿಂದೆಯೇ ಪ್ರಾರಂಭವಾಗಿತ್ತು. ಸ್ವಾಮೀಣ ಕೃಪಾಂಗದ ವಿಷಯವು ನ್ಯಾಯಾಲಯದಲ್ಲಿ ಇತ್ಯರ್ಥವಾಗದ ಕಾರಣ ಸರ್ಕಾರದ ನೀರ್ಧಾರದಂತೆ ತಾತ್ಕಾಲಿಕವಾಗಿ ತಡೆಹಿಡಿಯಲಾಗಿತ್ತು. ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಿರಲಿಲ್ಲ.

3) ಪ್ರೌಢಶಾಲಾ ಚಿತ್ರಕಲಾ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ಈಗಾಗಲೇ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿದ್ದು ಅಂತಿಮ ಫಲಿತಾಂಶವನ್ನು ಪ್ರಕಟಿಸುವ ಹಂತದಲ್ಲಿದೆ.

ಪ್ರಾಥಮಿಕ ಶಾಲೆಗಳಲ್ಲಿನ ಚಿತ್ರಕಲಾ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ವ್ಯಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಪ್ರಕ್ರಿಯೆ ಇತ್ತೀಚೆಗೆ ಅಂತಿಮಗೊಳ್ಳಲಿದ್ದು, ಅಂತಿಮವಾದ ತಕ್ಷಣ ಹುದ್ದೆಗಳನ್ನು ಭರ್ತಿಮಾಡಲಾಗುವುದು.

ಮೈಸೂರು ಚಾಮರಾಜ ಕ್ಷೇತ್ರದಲ್ಲಿನ ಸರ್ಕಾರಿ ಶಾಲೆಗಳಿಗೆ ಮೂಲಭೂತ ಸೌಲಭ್ಯ

೨೬೦೯(೩೧೪೬) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) :—

ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರಿನ ಚಾಮರಾಜ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಯಾವ ಯಾವ ಸರ್ಕಾರಿ ಶಾಲೆಗಳಲ್ಲಿ ಯಾವ ರೀತಿಯ ಮೂಲಭೂತ ಸೌಲಭ್ಯಗಳ ಕೊರತೆ ಇದೆ;

ಆ) ಈ ಶಾಲೆಗಳಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಹೋಗಲಾಡಿಸಲು ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ;

ಇ) ಹಾಗಿಲ್ಲದಿದ್ದರೆ ಇನ್ನು ಮುಂದೆಯಾದರೂ ಯಾವ ರೀತಿಯ ಕ್ರಮಕ್ಕೆಗೊಳ್ಳುವುದು?

ಶ್ರೀ ಹೆಚ್. ವಿಶ್ವನಾಥ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :—

ಅ) ಚಾಮರಾಜ ಕ್ಷೇತದಲ್ಲಿ ೨೦ ಪ್ರಾಥಮಿಕ ಶಾಲೆಗಳಿಗೆ ಮೂಲಭೂತ ಸೌಕರ್ಯದ ಅಗತ್ಯತೆ ಇದೆ.

ಆ) ಕುಕ್ಕರಹಳ್ಳಿ ಮತ್ತು ವಸಂತನಗರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಈ ಶಾಲೆ ಕಟ್ಟಡಗಳ ದುರಸ್ಥಿ ಕಾಮಗಾರಿಕೆ ಕ್ರಮಕ್ಕೆಗೊಂಡಿದೆ. ಸರ್ಕಾರಿ ಪ್ರೌಢಶಾಲೆ, ಮೇಜರ್ ಬ್ಲಾಕ್ ಹಾಗೂ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಕುಕ್ಕರ ಹಳ್ಳಿ ಇಲ್ಲಿಗೆ ಪೀಠೋಪಕರಣ ಸರಬರಾಜು ಮಾಡಿ ಕುಡಿಯುವ ನೀರು ಹಾಗೂ ಶೌಚಾಲಯ ಕಲ್ಪಿಸಲಾಗಿದೆ.

ಇ) ಹಂತ ಹಂತವಾಗಿ ಆರ್ಥಿಕ ಸೌಲಭ್ಯ ಆದರಿಸಿ ಈ ಸಮಸ್ಯೆ ಬಗೆಹರಿಸಲು ಕ್ರಮಕ್ಕೆಗೊಳ್ಳಲಾಗುವುದು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪದವಿ ತರಗತಿಗಳ ಶುಲ್ಕ ಹೆಚ್ಚಳ

2610 (3147) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) :— ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪದವಿ ತರಗತಿಗಳ ಮತ್ತು ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಶುಲ್ಕವನ್ನು ಹೆಚ್ಚಿಸಲಾಗಿದೆಯೆ;

ಆ) ಹಾಗಿದ್ದಲ್ಲಿ, ಈ ಹಿಂದೆ ಇದ್ದ ಶುಲ್ಕದ ವಿವರವೇನು ಈಗ ಹೆಚ್ಚಿಸಿರುವ ಶುಲ್ಕದ ವಿವರಗಳೇನು;

ಇ) ಹೀಗೆ ಅವೈಜ್ಞಾನಿಕವಾಗಿ ಶುಲ್ಕ ಹೆಚ್ಚಿಸಿರುವುದರಿಂದ ವಿದ್ಯಾರ್ಥಿಗಳು ಹಾಗೂ ಪೋಷಕರು ಕಂಗಾಲಾಗಿರುವುದ ಸರ್ಕಾರದ ಗಮನಕ್ಕೆ ಬಂದಿದೆಯೆ;

ಈ) ಈ ರೀತಿಯಾಗಿ ಹೆಚ್ಚಿಸಿರುವ ಶುಲ್ಕವನ್ನು ಕಡಿಮೆ ಮಾಡುವ ಬಗ್ಗೆ ಸರ್ಕಾರದ ತೀರ್ಮಾನವೇನು?

ಡಾ: ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :—

ಅ) ಹೌದು.

ಆ) ಒಂದನೇ ಅನುಬಂಧದಲ್ಲಿದೆ.

ಇ) ಇಲ್ಲ.

ಈ) ವಿಶ್ವವಿದ್ಯಾಲಯಗಳು ತಮ್ಮದೇ ಆದ ಸಂಪನ್ಮೂಲಗಳನ್ನು ರೂಢಿಸಿಕೊಳ್ಳಲು ಶುಲ್ಕ ಪರಿಷ್ಕರಣೆ ಅನಿವಾರ್ಯವಾಗಿದೆ. ಆದ್ದರಿಂದ ಹೆಚ್ಚಿಸಿರುವ ಶುಲ್ಕವನ್ನು ಕಡಿಮೆ ಮಾಡಲು ಆಸ್ಪದವಿಲ್ಲ.